# ಕರ್ನಾಟಕ ಸರ್ಕಾರ
# (ವಿದ್ಯುತ್ ಪರಿವೀಕ್ಷಣಾಲಯ)

ಮಾಹಿತಿ ಹಕ್ಕು 2005 ಸೆಕ್ಷನ್ 4 (1) (ಬಿ) ರ ಅನುಗುಣವಾಗಿ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗ ವೃತ್ತ, ಚಿತ್ರದುರ್ಗ ಕಚೇರಿ ಮಾಹಿತಿ.

**1. ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರ:-**

ವಿದ್ಯುತ್ ಪರಿವೀಕ್ಷಣಾಲಯದ ಕೇಂದ್ರ ಕಛೇರಿಯು ನಿರ್ಮಾಣ ಭವನ, 2 ನೇ ಮಹಡಿ, ಪಿ.ಬಿ ನಂ.5148, ಡಾ॥ರಾಜಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು-560010 ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯದ ಇಲಾಖಾ ಮುಖ್ಯಸ್ಥರು ಆಗಿರುತ್ತಾರೆ. ಮುಖ್ಯ ವಿದ್ಯುತ್ ಪರಿವೀಕ್ಷಕರ ಅಧೀನದಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಮೈಸೂರು ಮತ್ತು ಧಾರವಾಡ, ಕಲಬುರ್ಗಿ, ಮಂಗಳೂರು ಎಂಬ ಆರು ವಲಯಗಳಿದ್ದು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ವಲಯದ ಅಧಿಕಾರಿ ಆಗಿರುತ್ತಾರೆ. ಚಿತ್ರದುರ್ಗ ವೃತ್ತದ ಕೇಂದ್ರ ಕಛೇರಿಯು #45, ಮೊದಲನೇ ಮಹಡಿ, ಮಿತ್ರಾ ಬಡಾವಣೆ, ಮೇದೆ ಹಳ್ಳಿ ರಸ್ತೆ, ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹತ್ತಿರ, ಚಿತ್ರದುರ್ಗ, ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಚಿತ್ರದುರ್ಗ ವೃತ್ತದ ಮುಖ್ಯಸ್ಥರಾಗಿರುತ್ತಾರೆ. ಅವರ ಅಧೀನದಲ್ಲಿ ಒಂದು ವಿದ್ಯುತ್ ಪರಿವೀಕ್ಷಕರ ವಿಭಾಗೀಯ ಕಚೇರಿ, ದಾವಣಗೆರೆಯಲ್ಲಿ ಇದ್ದು ವಿದ್ಯುತ್ ಪರಿವೀಕ್ಷಕರು ಕಛೇರಿಯ ಮುಖ್ಯಸ್ಥರಾಗಿದ್ದು, ಉಪ ವಿದ್ಯುತ್ ಪರಿವೀಕ್ಷಕರು ಹಾಗೂ ಸಹಾಯಕ ವಿದ್ಯುತ್ ಪರಿವೀಕ್ಷಕರು ಮತ್ತು ತಾಂತ್ರಿಕೇತರ ಸಿಬ್ಬಂದಿ ವರ್ಗದವರು ಆ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

### ಚಿತ್ರದುರ್ಗ ವೃತ್ತದ ವ್ಯಾಪ್ತಿಯ ಕಚೇರಿಗಳ ಮುಖ್ಯ ಧ್ಯೇಯೋದ್ದೇಶಗಳು

ವೃತ್ತದ ವ್ಯಾಪ್ತಿಯಲ್ಲಿ (ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳು) ಬರುವ ಎಲ್ಲಾ ವಿದ್ಯುತ್ ಸ್ಥಾವರಗಳು, ವಿದ್ಯುತ್ ಪ್ರಸರಣಾ ಮಾರ್ಗಗಳು ಮತ್ತು ವಿತರಣಾ ಕೇಂದ್ರಗಳು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003 ಹಾಗೂ ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ (ಮೆಸರ್ಸ್ ರಿಲೇಟಿಂಗ ಟು ಸೇಫ್ಟಿ ಆ್ಯಂಡ ಎಲೆಕ್ಟ್ರಿಸಿಟಿ ಸಪ್ಲೈ) ರೂಲ್ಸ 2010 ಕ್ಕೆ ಅನುಗುಣವಾಗಿ ಸುರಕ್ಷಿತವಾಗಿರುವ ಹಾಗೆ ಕಾಪಾಡಲು ಸೂಕ್ತ ಮಾರ್ಗದರ್ಶನ ನೀಡಿ ವಿದ್ಯುತ್‌ನಿಂದ ಮಾನವನಿಗೆ, ಪ್ರಾಣಿಗಳಿಗೆ ಮತ್ತು ಸಾರ್ವಜನಿಕರ ಆಸ್ತಿ-ಪಾಸ್ತಿಗಳಿಗೆ ಯಾವುದೇ ರೀತಿಯ ಅಪಾಯವಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಬಗ್ಗೆ ವಿದ್ಯುತ್ ಬಳಕೆದಾರರಿಗೆ ಹಾಗೂ ಸರಬರಾಜುದಾರರಿಗೆ ಸಲಹೆ ನೀಡುವುದು.

### ಮೇಲಿನ ಧ್ಯೇಯೋದ್ದೇಶಗಳನ್ನು ಕಾರ್ಯ ರೂಪಕ್ಕೆ ತರಲು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಚಿತ್ರದುರ್ಗ ವೃತ್ತವು ಈ ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸುತ್ತದೆ.

ವಿದ್ಯುತ್ ಬಳಕೆದಾರರ ಮತ್ತು ಸರಬರಾಜುದಾರರು ವಿದ್ಯುತ್ ಸ್ಥಾವರಗಳನ್ನು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003 ಹಾಗೂ ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ (ಮೆಸರ್ಸ್ ರಿಲೇಟಿಂಗ ಟು ಸೇಫ್ಟಿ ಆ್ಯಂಡ ಎಲೆಕ್ಟ್ರಿಸಿಟಿ ಸಪ್ಲೈ) ರೂಲ್ಸ 2010ರ ಅನುಗುಣವಾಗಿ ಸ್ಥಾಪಿಸುವುದು ಕಡ್ಡಾಯವಾಗಿರುವುದರಿಂದ ನಿಯಮಗಳ ಪ್ರಕಾರ ವಿದ್ಯುತ್ ಮಾರ್ಗಗಳು, ವಿತರಣಾ ಕೇಂದ್ರಗಳು,

ಅಧಿಕ ಒತ್ತಡ ಸ್ಥಾವರ, ವಿದ್ಯುತ್ ಜನಕಗಳು ಮತ್ತು ಬಹುಮಹಡಿ ಕಟ್ಟಡ, ಲಿಫ್ಟ್/ಎಸ್ಕಲೇಟರ್‌ಗಳು, ತಾತ್ಕಾಲಿಕ ವಿದ್ಯುತ್ ಸ್ಥಾವರಗಳನ್ನು ಅನುಮೋದಿತ ನೀಲಿ ನಕ್ಷೆಯ ಪ್ರಕಾರ ಸ್ಥಾಪಿಸುವಂತೆ ತಿಳುವಳಿಕೆ ಹಾಗು ಸಲಹೆ ನೀಡುವುದು.

1. ಬೆಸ್ಕಾಂ ವಿದ್ಯುತ್ ಸರಬರಾಜುದಾರರ ವ್ಯಾಪ್ತಿಯಲ್ಲಿ ಬರುವ ಎಲ್ಲಾ 66ಕೆವಿ ವಿದ್ಯುತ್ ವಿತರಣಾ ಕೇಂದ್ರ ಮತ್ತು ಅದಕ್ಕಿಂತ ಕೆಳಗಿನ ಒತ್ತಡದ ವಿದ್ಯುತ್ ಮಾರ್ಗಗಳ, ಇಹೆಚ್‌ವಿ/ಹೆಚ್‌ವಿ/ಎಮ್‌ವಿ ವಿದ್ಯುತ್ ಮಾರ್ಗಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
2. 2000 ಕೆವಿಎ ರವರೆಗಿನ ಗ್ರಾಹಕರ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ,
3. ಎಲ್ಲಾ 24ಮೀಟರ್ ಎತ್ತರದವರೆಗಿನ ಕಟ್ಟಡಗಳಲ್ಲಿನ ಲಿಫ್ಟ್‌ಗಳು/ ಎಸ್ಕ್ಯಲೇಟರಗಳು/ ಟ್ರ್ಯಾವಲೇಟರ್ಸ್‌ಗಳ ಸ್ಥಾಪನಾ ಅನುಮೋದನೆ ಮತ್ತು ಪರಿವೀಕ್ಷಣೆ ಮತ್ತು ಶಿಫಾರಸ್ಸು.
4. ಎಲ್ಲಾ ಕ್ಷ-ಕಿರಣಗಳು, ನಿಯಾನ್ ಸೈನ್ಸ್‌ಗಳ ನೀಲಿ ನಕ್ಷೆ ಅನುಮೋದನೆ, ಪರಿವೀಕ್ಷಣೆ ಹಾಗೂ ಅನುಮೋದನೆ.
5. ಎಲ್ಲಾ 24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡದಲ್ಲಿ ಅಳವಡಿಸಿರುವ 2000 ಕೆ.ವಿ.ಎ ಸಾಮರ್ಥ್ಯದ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ ಹೆಚ್.ಟಿ/ಎಲ್.ಟಿ ಸಪ್ಲೈ ಇವುಗಳ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
6. ಎಲ್ಲಾ ಅರೆಶಾಶ್ವತ ಚಿತ್ರಮಂದಿರಗಳ ನೀಲಿ ನಕ್ಷೆ ಅನುಮೋದನೆ ಹಾಗೂ Renovated Permanent Thetrs (ನವೀಕರಣಗೊಳಿಸಿದ ಶಾಶ್ವತ ಚಿತ್ರ ಮಂದಿರ) ಪರಿವೀಕ್ಷಣೆ.
7. 100 ಜನರಿಗಿಂತಲೂ ಹೆಚ್ಚಿನ ಜನಸಂದಣಿ ಇರುವಂತಹ ಸಮಾರೋಪ ಸಮಾರಂಭಗಳಲ್ಲಿ ಅಳವಡಿಸಿರುವ ತಾತ್ಕಾಲಿಕ ವಿದ್ಯುತ್ ಸ್ಥಾವರಗಳಲ್ಲಿ 2000 ಕೆವಿಎ ರವರೆಗಿನ ನೀಲಿ ನಕ್ಷೆ ಅನುಮೋದನೆ ಮತ್ತು ಪರಿವೀಕ್ಷಣೆ ಹಾಗೂ ಅನುಮೋದನೆ.
8. 8 ಜನ ಮಾನವರನ್ನೊಳಗೊಂಡ ಮಾರಕ (ಮರಣಾಂತಿಕ), ಎಲ್ಲಾ ಪ್ರಾಣಿಗಳಿಗೆ ಮಾರಕ, ಮಾನವರಿಗೆ ಅಮರಣಾಂತಿಕ ಬೆಂಕಿ ವಿದ್ಯುತ್ ಅಪಘಾತಗಳ ತನಿಖೆ ನಡೆಸುವುದು ಮತ್ತು ಸರ್ಕಾರಕ್ಕೆ ತನಿಖಾ ವರದಿಯನ್ನು ಸಲ್ಲಿಸುವುದು.
9. ಅಧಿಕಾರಿಗಳ ಕಾರ್ಯವ್ಯಾಪ್ತಿಗೆ ಬರುವ ಎಲ್ಲಾ ವಿದ್ಯುತ್ ಮಾಪನಗಳ ಖಚಿತತೆ ಬಗ್ಗೆ ನಡೆಯುವ ತಪಾಸಣೆಯಲ್ಲಿ ಸಾಕ್ಷಿಕರಿಸುವುದು.
10. ಈ ಇಲಾಖೆಯ ಭಾರತೀಯ ವಿದ್ಯುಚ್ಚಕ್ತಿ ಕಾಯಿದೆ 2003 ಹಾಗೂ ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ (ಮೆಸರ್ಸ್ ರಿಲೆಟಿಂಗ ಟು ಸೆಫ್ಟಿ ಆ್ಯಂಡ ಎಲೆಕ್ಟ್ರಿಸಿಟಿ ಸಪ್ಲೈ) ರೂಲ್ಸ 2010 ರ ಪ್ರಕಾರ ಎಲ್ಲಾ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ಕರ್ನಾಟಕ ಸರಕಾರ ಇಂಧನ ಇಲಾಖೆ ಅಧಿಸೂಚನೆ ಸಂ.ಇ.ಎನ್ 5 ಇ.ಬಿ.ಎಸ್ 2012 ದಿ:12.09.2013ರ ಪ್ರಕಾರ ಆಯಾ ಅಧಿಕಾರಿಗಳು ಅವರವರ ಕಾರ್ಯವ್ಯಾಪ್ತಿ ಮತ್ತು ಅಧಿಕಾರ ವ್ಯಾಪ್ತಿಯ ಅನುಸಾರವಾಗಿ ನಡೆಸುತ್ತಾರೆ.
11. ಈ ಇಲಾಖೆಯು ಭಾರತೀಯ ವಿದ್ಯುಚ್ಚಕ್ತಿ ಕಾಯಿದೆ 2003 ಹಾಗೂ ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ (ಮೆಸರ್ಸ್ ರಿಲೆಟಿಂಗ ಟು ಸೆಫ್ಟಿ ಆ್ಯಂಡ ಎಲೆಕ್ಟ್ರಿಸಿಟಿ ಸಪ್ಲೈ) ರೂಲ್ಸ 2010 ರ ಪ್ರಕಾರ ಅಗತ್ಯವಿರುವ ಕರ್ನಾಟಕ (ವಿದ್ಯುತ್ ಗುತ್ತಿಗೆದಾರರು, ವಿಶೇಷ ತಂತಿರಹದಾರಿ ಅನುಮತಿ ಮತ್ತು ಮೇಲ್ವಿಚಾರಕರು ಮತ್ತು ವೈರ್‌ಮನ್‌ಗಳ ಪರವಾನಿಗೆ ಮತ್ತು ಅನುಮತಿ) ನಿಯಮಗಳು 2012 ಅನ್ನು ಜಾರಿಗೊಳಿಸಿರುತ್ತದೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗ ರವರ ವ್ಯಾಪ್ತಿಗೆ ಬರುವ ಉಪ ವಿಭಾಗಾಧಿಕಾರಿಗಳು (ಉಪ ವಿದ್ಯುತ್ ಪರಿವೀಕ್ಷಕರುಗಳು) ಈ ನಿಯಮಾನುಸಾರ

ಜಿಲ್ಲಾ ವ್ಯಾಪ್ತಿಗೆ ಸಂಬಂಧಪಟ್ಟ ಅರ್ಜಿಗಳನ್ನು ಆನ್ ಲೈನ್ ಮೂಲಕ ಉಪ ವಿಭಾಗಗಳಲ್ಲೇ ಸ್ವೀಕರಿಸಿ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಂಗಳೂರಿಗೆ ಆನ್ ಲೈನ್ ಮೂಲಕ ರವಾನೆ ಮಾಡಲಾಗುವುದು. ಹಾಗೂ ಆನ್ ಲೈನ್ ಮೂಲಕ ಉಪ ವಿಭಾಗ ಹಂತದಲ್ಲಿ ಮೇಲ್ವಿಚಾರಕರ ಮತ್ತು ತಂತಿ ರಹದಾರಿ ಹಿಂಬರಹಗೊಳಿಸುವುದು.

12. ಸಿನೆಮಾ ಆಪರೇಟರ್‌ಗಳ ಪರವಾನಗಿಗಳನ್ನು ನವೀಕರಣ/ಹಿಂಬರಹವನ್ನು ದಾವಣಗೆರೆ ವಿಭಾಗ ಕಛೇರಿಯಲ್ಲಿ ಮಾಡಲಾಗುವುದು.

## 2. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಚಿತ್ರದುರ್ಗ ವೃತ್ತ ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಅಧಿಕಾರಿಗಳ ಕರ್ತವ್ಯಗಳು:–

### 1) ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗ:

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರವರು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳನ್ನೊಳಗೊಂಡ ವೃತ್ತಕ್ಕೆ ತಾಂತ್ರಿಕ ಮುಖ್ಯಸ್ಥರಾಗಿರುತ್ತಾರೆ ಹಾಗೂ ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

1. 33ಕೆವಿಗಿಂತ ಮೇಲ್ಪಟ್ಟ ಮತ್ತು 66ಕೆವಿ ವರೆಗಿನ ವಿತರಣಾ ಕೇಂದ್ರಗಳ ಮತ್ತು ಮಾರ್ಗಗಳ, ಹೆಚ್.ಟಿ 24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳು ಮತ್ತು ಅದರಲ್ಲಿನ 2000ಕೆವಿಎ ವರೆಗಿನ ಗ್ರಾಹಕರ ವಿದ್ಯುತ್ ಸ್ಥಾವರದಲ್ಲಿ ಹೊಂದಿರುವ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ, ಎಲ್.ಟಿ 18ಮೀಟರ್‌ಗಿಂತ ಮೇಲ್ಪಟ್ಟ ಮತ್ತು 24ಮೀಟರ್ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳು ಮತ್ತು ಅದರಲ್ಲಿನ 100ಕೆವಿಎ ಗಿಂತ ಮೇಲ್ಪಟ್ಟ ಮತ್ತು 2000ಕೆವಿಎವರೆಗಿನ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ, ಗ್ರಾಹಕರ ಹೆಚ್.ಟಿ 500ಕೆವಿಎ ಗಿಂತ ಮೇಲ್ಪಟ್ಟ ಮತ್ತು 2000ಕೆವಿಎವರೆಗಿನ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್ ಜನಕಗಳ, ಹೆಚ್.ಟಿ/ಎಲ್.ಟಿ 24ಮೀಟರ್ ಮೇಲ್ಪಟ್ಟ ಎತ್ತರದವರೆಗಿನ ಬಹುಮಹಡಿ ಕಟ್ಟಡಗಳು ಮತ್ತು ಅದರಲ್ಲಿನ 2000ಕೆವಿಎ ವರೆಗಿನ ಗ್ರಾಹಕರ ವಿದ್ಯುತ್ ಪರಿವರ್ತಕ ಮತ್ತು ವಿದ್ಯುತ್‌ಜನಕಗಳ, ವಿದ್ಯುತ್ ಸ್ಥಾವರದಲ್ಲಿ ಹೊಂದಿರುವ ಲಿಫ್ಟ್/ಎಸ್ಕಲೇಟರ್ಸ್‌ನ, ನವೀಕರಣಗೊಳಿಸಿದ ಚಿತ್ರಮಂದಿರಗಳ, ನೀಲಿನಕ್ಷೆ ಅನುಮೋದನೆ ಮತ್ತು ಪ್ರಾಥಮಿಕ ಪರಿವೀಕ್ಷಣೆ ಮಾಡುವುದು. 500ಕೆವಿಎ ಗಿಂತ ಮೇಲ್ಪಟ್ಟ ಮತ್ತು 2000ಕೆವಿಎ ವರೆಗಿನ ಟ್ರೇಡ್ ಫೇರ್, ಪ್ರದರ್ಶನಗಳ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮಾಡುವುದು.
2. 66ಕೆವಿಗಿಂತ ಮೇಲ್ಪಟ್ಟ ಮತ್ತು 110ಕೆವಿ ವರೆಗಿನ ವಿತರಣಾ ಕೇಂದ್ರಗಳು ಮತ್ತು ಲೈನುಗಳು, 1500ಕಿ.ವ್ಯಾ ಸಾಮರ್ಥ್ಯದವರೆಗಿನ ಎಲ್ಲಾ ಗಾಳಿ ವಿದ್ಯುತ್ ಉತ್ಪಾದನಾ ಕೇಂದ್ರಗಳು, 20 ಮೆ.ವ್ಯಾ ಸಾಮರ್ಥ್ಯರವರೆಗಿನ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳು, 3000ಕೆವಿಎ ಗಿಂತ ಮೇಲ್ಪಟ್ಟ ಮತ್ತು 15000ಕೆವಿಎವರೆಗಿನ ಗ್ರಾಹಕರ ಅಧಿಕ ಒತ್ತಡ ಪರಿವರ್ತಕ ಮತ್ತು ವಿದ್ಯುತ್ ಜನಕಗಳು, ಎಲ್ಲಾ ಶಾಶ್ವತ ಚಿತ್ರಮಂದಿರಗಳು, ಹೆಚ್.ಟಿ ಸಪ್ಲೈ ನ 24ಮೀಟರ್ ವರೆಗಿನ ಬಹುಮಹಡಿ ಕಟ್ಟಡಗಳ ನಿಯತಕಾಲಿಕ ಪರಿವೀಕ್ಷಣೆ ಮಾಡುವುದು, ವಿದ್ಯುತ್ ಪರಿವೀಕ್ಷಕರಿಂದ ಶಿಫಾರಸ್ಸಾದ ಅರೆಕಾಲಿಕ ಚಿತ್ರ ಮಂದಿರಗಳಿಗೆ ವಿದ್ಯುತ್ ಯೋಗ್ಯತಾ ಪತ್ರ ನೀಡುವುದು.
3. 5 ಜನರಿಗಿಂತ ಹೆಚ್ಚಿನ ಮತ್ತು 8 ಜನರನ್ನೊಳಗೊಂಡು ಸಂಭವಿಸಿದಂತಹ ಮರಣಾಂತಿಕ ವಿದ್ಯುತ್ ಅಪಘಾತಗಳನ್ನು ತನಿಖೆ ಮಾಡಿ, ಸದರಿ ಅಪಘಾತಗಳ ವರದಿಯನ್ನು ಅಮುವಿಪರವರಿಗೆ ಸಲ್ಲಿಸುವುದು, ಮತ್ತು ವಿಪ (ವಿಭಾಗವಾರು) ರವರು ಸಲ್ಲಿಸಿದ 1 ಜನರಿಗಿಂತ ಅಧಿಕ ಮತ್ತು 5 ಜನ ಮಾನವರನ್ನೊಳಗೊಂಡ ಮಾರಣಾಂತಿಕ ವಿದ್ಯುತ್ ಅಪಘಾತಗಳ, ಬೆಂಕಿ ಅಪಘಾತಗಳ ಮತ್ತು

ಆನೆಗಳಿಗೆ ಸಂಭವಿಸಿದಂತಹ ಮರಣಾಂತಿಕ ವಿದ್ಯುತ್ ಅಪಘಾತಗಳ ತನಿಖಾ ವಿವರಗಳ ಆಧಾರದ ಮೇಲೆ ಅಂತಿಮ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವುದು.

4. ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷರು, ಬೆಂಗಳೂರು ಉತ್ತರ, ಬೆಂಗಳೂರು ರವರು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಧೀನ ಕಛೇರಿ ವ್ಯಾಪ್ತಿಗೆ ಬರುವಂತಹ ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸುಸೂತ್ರವಾಗಿ ನಡೆಯುವ ಕುರಿತು ನಿಗಾವಹಿಸುವುದು.
5. ಮಾಹಿತಿ ಹಕ್ಕು ಅಧಿನಿಯಮದ ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ.

## 2) **ಉಪ ವಿದ್ಯುತ್ ಪರಿವೀಕ್ಷಕರು ಚಿತ್ರದುರ್ಗ :-**

ಉಪ ವಿದ್ಯುತ್ ಪರಿವೀಕ್ಷಕರವರು ಚಿತ್ರದುರ್ಗ ಜಿಲ್ಲೆಯನ್ನೊಳಗೊಂಡ ಉಪ ವಿಭಾಗದ ತಾಂತ್ರಿಕ ಮುಖ್ಯಸ್ಥರಾಗಿರುತ್ತಾರೆ ಹಾಗೂ ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

1. 11ಕೆವಿ ವರೆಗಿನ ವಿತರಣಾ ಕೇಂದ್ರಗಳ ಮತ್ತು ಮಾರ್ಗಗಳ, ಗ್ರಾಹಕರ ಹೆಚ್.ಟಿ 200ಕೆವಿಎ ವರೆಗಿನ ವಿದ್ಯುತ್ ಪರಿವರ್ತಕ ಮತ್ತು ಗ್ರಾಹಕರ 150ಕೆವಿಎ ವರೆಗಿನ ವಿದ್ಯುತ್ ಜನಕಗಳ, ಟೂರಿಂಗ್ ಟಾಕೀಸ್‌ಗಳ, ಎಲ್ಲಾ ಎಕ್ಸ್ ರೇ ಗಳ, ನೀಲಿನಕ್ಷೆ ಅನುಮೋದನೆ ಮತ್ತು ಪ್ರಾಥಮಿಕ ಪರಿವೀಕ್ಷಣೆ ಮಾಡುವುದು, 25ಕಿ.ವ್ಯಾ ವರೆಗಿನ ಸರ್ಕಸ್, ನಾಟಕ, ದೀಪಾವಳಿ, ಗಣೇಶ ಹಬ್ಬಗಳಲ್ಲಿ ಅಳವಡಿಸಿದ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮಾಡುವುದು.
2. 11ಕೆವಿಗಿಂತ ಮೇಲ್ಪಟ್ಟ ಮತ್ತು 33ಕೆವಿ ವರೆಗಿನ ವಿತರಣಾ ಕೇಂದ್ರಗಳ, 25ಕೆವಿಎ ಗಿಂತ ಮೇಲ್ಪಟ್ಟ ಮತ್ತು 350ಕೆವಿಎ ವರೆಗಿನ ಗ್ರಾಹಕರ ಅಧಿಕ ಒತ್ತಡ ಪರಿವರ್ತಕ, 25ಕೆವಿಎ ಗಿಂತ ಮೇಲ್ಪಟ್ಟ ಮತ್ತು 350ಕೆವಿಎ ವರೆಗಿನ ಗ್ರಾಹಕರ ವಿದ್ಯುತ್ ಜನಕಗಳ, ಎಲ್ಲಾ ತಾತ್ಕಾಲಿಕ ಸಿನೆಮಾಗಳು, ಎಲ್.ಟಿ ಸಪ್ಲೈ ನ 15ಮೀಟರ್‌ಗಿಂತ ಹೆಚ್ಚಿನ ಮತ್ತು 24ಮೀಟರ್ ವರೆಗಿನ ಬಹುಮಹಡಿ ಕಟ್ಟಡಗಳ ಮತ್ತು ಅವುಗಳಲ್ಲಿನ ವಿದ್ಯುತ್ ಜನಕಗಳ, ಲಿಫ್ಟ್‌ಗಳ, ನಿಯಾನ್ ಸೈನ್ಸ್‌ಗಳ ಮತ್ತು ಎಲ್ಲಾ ಎಕ್ಸ್ ರೇ ಗಳ ನಿಯತಕಾಲಿಕ ಪರಿವೀಕ್ಷಣೆ ಮಾಡುವುದು.
3. ಒಬ್ಬ ಮಾನವನಿಗೆ ಸಂಭವಿಸಿದ ಮರಣಾಂತಿಕ ಮತ್ತು ಮರಣಾಂತಿಕವಲ್ಲದ ವಿದ್ಯುತ್ ಅಪಘಾತಗಳ ತನಿಖೆ ಮಾಡಿ, ಸದರಿ ಅಪಘಾತಗಳ ವರದಿಯನ್ನು ವಿದ್ಯುತ್ ಪರಿವೀಕ್ಷಕರು, ದಾವಣಗೆರೆ ರವರಿಗೆ ಸಲ್ಲಿಸುವುದು ಮತ್ತು ಸವಿಪ ರವರು ಸಲ್ಲಿಸಿದ ಪ್ರಾಣಿಗಳಿಗೆ ಸಂಭವಿಸಿದ ಮರಣಾಂತಿಕ ವಿದ್ಯುತ್ ಅಪಘಾತದ ತನಿಖಾ ವಿವರಗಳ ಆಧಾರದ ಮೇಲೆ ಅಂತಿಮ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವುದು.
4. ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷರು, ಬೆಂಗಳೂರು ಉತ್ತರ, ಬೆಂಗಳೂರು, ಉಪ ಮುಖ್ಯ ವಿದ್ಯುತ್ ಪರಿವೀಕ್ಷರು, ಚಿತ್ರದುರ್ಗ, ವಿದ್ಯುತ್ ಪರಿವೀಕ್ಷರು, ದಾವಣಗೆರೆ ರವರು ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಸವಿಪ ರವರ ವ್ಯಾಪ್ತಿಗೆ ಬರುವಂತಹ ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸುಸೂತ್ರವಾಗಿ ನಡೆಯುವ ಕುರಿತು ನಿಗಾವಹಿಸುವುದು.
5. ಆನ್ ಲೈನ್ ಮೂಲಕ ಹೊಸದಾಗಿ ಸಲ್ಲಿಸಿರುವ ವಿದ್ಯುತ್ ಗುತ್ತಿಗೆದಾರರ ಪರವಾನಗಿ ಅರ್ಜಿ, ಪರ್ಯವೇಕ್ಷಕರ ಮತ್ತು ತಂತಿ ಕೆಲಸಗಾರರ ಅರ್ಜಿಗಳನ್ನು ಪರಿಶೀಲಿಸುವುದು ಮತ್ತು ಎಲ್ಲಾ ಅರ್ಜಿಗಳನ್ನು ಕೇಂದ್ರ ಕಚೇರಿಗೆ (ಲೈಸೆಂನ್ಸಿಂಗ್ ಬೋರ್ಡ) ಗೆ ಸಲ್ಲಿಸಲು ಕ್ರಮ ಕೈಗೊಳ್ಳುವುದು. ಮತ್ತು ಆನ್ ಲೈನ್ ಮೂಲಕ ಮೇಲ್ವಿಚಾರಕರ ಮತ್ತು ತಂತಿ ರಹದಾರಿ ಹಿಂಬರಹಗೊಳಿಸುವುದು.

ಇವರಿಗೆ ತಾಂತ್ರಿಕ ವಿಷಯದಲ್ಲಿ ಸವಿಪ ಮತ್ತು ಆಡಳಿತ ವಿಷಯದಲ್ಲಿ ಪ್ರದಸ ಮತ್ತು ದ್ವಿದಸರವರು ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ.

6. ಕಾರ್ಯವ್ಯಾಪ್ತಿಯ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದಂತೆ ಉಪ ವಿಭಾಗದ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ.

**3) ಸಹಾಯಕ ವಿದ್ಯುತ್ ಪರಿವೀಕ್ಷಕರು 1 & 2 (ಕ್ಷೇತ್ರಿಯ) :–**

ಸವಿಪ ಕ್ಷೇತ್ರಿಯ ರವರುಗಳು ಉಪ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗ ರವರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ಚಿತ್ರದುರ್ಗ ಉಪ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸವಿಪ–1 ಕ್ಷೇತ್ರಿಯ ರವರ ವ್ಯಾಪ್ತಿಯಲ್ಲಿ ಚಿತ್ರದುರ್ಗ, ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕಗಳು ಮತ್ತು ಸವಿಪ–2 ಕ್ಷೇತ್ರಿಯ ರವರ ವ್ಯಾಪ್ತಿಯಲ್ಲಿ ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕಗಳು ಒಳಗೊಂಡಿರುತ್ತದೆ. ಸವಿಪ ಕ್ಷೇತ್ರಿಯ ರವರ ಅಧಿಕಾರ ಪ್ರತ್ಯಾಯೋಜನೆಯಂತೆ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ಸಿಸ್ಟಂ ವೋಲ್ಟೇಜ್ 11ಕೆ.ವಿ ವರೆಗಿನ ವಿದ್ಯುತ್ ಸ್ಥಾವರಗಳು, ಎಲ್ಲಾ ನಿಯಾನ್ ಸೈನ್ಸ್‌ಗಳ ಪ್ರಾಥಮಿಕ ಪರಿವೀಕ್ಷಣೆಗಳನ್ನು ಮತ್ತು ಎಲ್ಲಾ ಡಿಸ್ಟ್ರಿಬ್ಯೂಷನ್ ಪರಿವರ್ತಕ ಕೇಂದ್ರಗಳ, 25ಕೆ.ವಿ.ಎ ವರೆಗಿನ ವಿದ್ಯುತ್ ಜನಕಗಳ, ನಿಯಾನ್ ಸೈನ್ಸ್‌ಗಳ, ನಿಯತಕಾಲಿಕ ಪರಿವೀಕ್ಷಣೆಗಳನ್ನು ಮತ್ತು ಪ್ರಾಣಿಗಳಿಗೆ (ಆನೆಗಳನ್ನು ಹೊರತುಪಡಿಸಿ) ಸಂಭಂಧಿಸಿದಂತಹ ಮರಣಾಂತಿಕ ವಿದ್ಯುತ್ ಅಪಘಾತಗಳ ತನಿಖೆಯನ್ನು ಕೈಗೊಂಡು ಉಪ ವಿದ್ಯುತ್ ಪರಿವೀಕ್ಷಕರವರಿಗೆ ವರದಿಯನ್ನು ಸಲ್ಲಿಸುವದು ಅವರ ಕರ್ತವ್ಯಗಳಾಗಿರುತ್ತವೆ. ಹಾಗೂ ಮೇಲಾಧಿಕಾರಿಗಳು ಸೂಚಿಸುವ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

**4) ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ):–**

ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ) ರವರು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರರವರಿಗೆ ವೃತ್ತದ ತಾಂತ್ರಿಕ ವಿಷಯದಲ್ಲಿ ಸಹಾಯಕರಾಗಿರುತ್ತಾರೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಾರ್ಯ ವ್ಯಾಪ್ತಿಯಲ್ಲಿ ಬರುವಂತಹ ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ ಮತ್ತು ಚಾಲನಾ ಅನುಮೋದನೆಗಳ ಕಡತಗಳನ್ನು ಪರಿಶೀಲಿಸಿ ಟಿಪ್ಪಣಿ ಮಂಡಿಸುವುದು ಮತ್ತು ತಾಂತ್ರಿಕ ವಿಷಯಕ್ಕೆ ಸಂಭಂಧಪಟ್ಟ ಕಡತಗಳ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಚಿತ್ರದುರ್ಗ ವೃತ್ತದ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರವರ ಸಾರ್ವಜನಿಕ ತಾಂತ್ರಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು, ಚಿತ್ರದುರ್ಗ ವೃತ್ತದ ಪ್ರತಿ ತಿಂಗಳ ಪ್ರಗತಿ ವರದಿಯನ್ನು ತಯಾರಿಸಿ, ಕ್ರೋಢಿಕರಿಸಿ ಅಮುವಿಪ ಬೆಂಗಳೂರು ಉತ್ತರ, ಬೆಂಗಳೂರು ಇವರಿಗೆ ಸಲ್ಲಿಸುವದು.

**5) ಅಧೀಕ್ಷಕರು**

ಆಡಳಿತ ವಿಷಯಕ್ಕೆ ಸಂಬಂಧಿಸಿದ ಇತರೆ ಎಲ್ಲ ವಿಷಯಗಳನ್ನು ಆರ್ಥಿಕ ಪ್ರತ್ಯಾಯೋಜನೆ ಮತ್ತು ಇತರೆ ಸರ್ಕಾರಿ ಆದೇಶಗಳನುಸಾರ ನಿರ್ವಹಿಸುವುದು ಮತ್ತು ಪರಿಪಾಲಿಸುವುದು. ಕಚೇರಿಯನ್ನು ಆಡಳಿತ ಕೈಪಿಡಿಯಲ್ಲಿ ತಿಳಿಸಿರುವಂತೆ ಸುಗಮವಾಗಿ ನಡೆಸಿಕೊಳ್ಳಲು ಸಮನ್ವಯಾಧಿಕಾರಿಯಾಗಿರುತ್ತಾರೆ. ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ. ಇಲಾಖಾ ರಾಜಸ್ವ ಕಂದಾಯ ಸ್ವೀಕೃತಿಯ ಲೆಕ್ಕ ಹೊಂದಾಣಿಕೆ ವ್ಯವಸ್ಥಿತಗೊಳಿಸುವುದು. ನ್ಯಾಯಾಲಯದಲ್ಲಿ ಬಾಕಿ ಇರುವ ವ್ಯಾಜ್ಯಗಳ ಕುರಿತು ಸರಕಾರಿ ವಕೀಲರಿಗೆ ಅವರು ಕೇಳುವ ದಾಖಲಾತಿ ಹಾಗೂ ವಿವರ ಒದಗಿಸುವದು. ಮಹಾಲೇಖಾಪಾಲಕರ ಲೆಕ್ಕ ಪರಿಶೋಧನೆ (ಆಡಿಟ್) ಪತ್ರ ವ್ಯವಹಾರಕ್ಕೆ ಉತ್ತರ ತಯಾರಿಸುವುದು. ವೃತ್ತ ಕಚೇರಿಯ

ಕಟ್ಟಡದ ಬಾಡಿಗೆಗೆ ಸಂಬಂಧಿಸಿದ ಪತ್ರ ವ್ಯವಹಾರಗಳು, ಮುಂಗಡಗಳು, ರಜೆ, ದೂರವಾಣಿ ಬಿಲ್ಲುಗಳ ನಿರ್ವಹಣೆ, ವೃತ್ತ ಕಚೇರಿಯ ಟಿ & ಪಿ ನಿರ್ವಹಣೆ ಬಗ್ಗೆ ಮೇಲುಸ್ತುವಾರಿ ಅಧಿಕಾರಿ/ಅಧಿಕಾರೇತರರ ವೇತನ ಬಿಲ್ಲುಗಳು, ಪ್ರಯಾಣ, ಸಾದಿಲ್ವಾರು ಇತ್ಯಾದಿಗಳ ಬಿಲ್ಲುಗಳನ್ನು ಪರಿಶೀಲಿಸುವುದು, ಸಿಬ್ಬಂದಿ ವಹಿಗಳನ್ನು ಮಾಹಿತಿ ಹಕ್ಕು ಕಾಯ್ದೆ ಅನುಸಾರ ನಿರ್ವಹಣೆ ಮಾಡಿಸುವುದು. ಮುಖ್ಯ ಶೀರ್ಷಿಕೆ 0043–ಕಂದಾಯ ಸ್ವೀಕೃತಿ ಮತ್ತು 2045–ಖರ್ಚುವೆಚ್ಚಗಳ ಮರುಹೊಂದಾಣಿಕೆ ನಿರ್ವಹಣೆ ಮೇಲುಸ್ತುವಾರಿ.

ತೆರಿಗೆ ವಿಷಯದಲ್ಲಿ ಮೇಲಾಧಿಕಾರಿಗಳಿಗೆ ಪತ್ರವ್ಯವಹಾರಗಳು ನಿಯಮಾನುಸಾರ ನಿರ್ವಹಿಸುವುದು. ಉಮುವಿಪ ರವರ ನಿಯತಕಾಲಿಕ ಪರಿವೀಕ್ಷಣೆ ಬಿಲ್ಲು ತಯಾರಿಸುವುದು, ಬಾಕಿ ವಸೂಲಾತಿಗಾಗಿ ಕ್ರಮ ಕೈಕೊಳ್ಳಲು ಪತ್ರ ವ್ಯವಹಾರ ಮಾಡುವುದು ಹಾಗೂ ಉಮುವಿಪ ರವರ ಡಿಸಿಬಿ ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಇತರೆ ಕೆಲಸ ಕಾರ್ಯಗಳು ಮತ್ತು ಪ್ರದಸ ಮತ್ತು ದ್ವಿದಸ ಮತ್ತು ಇತರೆ ಕಛೇರಿಯ ಸಿಬ್ಬಂದಿಯವರ ಎಲ್ಲಾ ಕೆಲಸ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಸುಸೂತ್ರವಾಗಿ ನಡೆಯುವ ಕುರಿತು ನಿಗಾವಹಿಸುವುದು.

**6) ಪ್ರದಸ:**

ರಾಜಸ್ವ ಕಂದಾಯ ಸ್ವೀಕೃತಿ, ನಗದು ಪುಸ್ತಕ ನಿರ್ವಹಣೆ ಮತ್ತು ಪರಿಪಾಲನೆ. ಸ್ವೀಕೃತಿಗೊಂಡಂತಹ ನಗದನ್ನು ಖಜಾನೆಗೆ ಸಂದಾಯ ಮಾಡುವುದು. ಖರ್ಚುವೆಚ್ಚಗಳ ಪಟ್ಟಿಯನ್ನು ತಯಾರಿಸುವುದು, ರೆವಿನ್ಯೂ ರಿಕನ್ಸ್‌ಲೇಷನ್ (ನಾನ್ ಪ್ಲಾನ್ 0043) ವರದಿ ತಯಾರಿಸುವುದು. ಅಧಿಕಾರಿಗಳ/ಸಿಬ್ಬಂದಿಗಳ ವೇತನ ಬಿಲ್ಲುಗಳು, ಕಚೇರಿ ಸಿಬ್ಬಂದಿ ಪ್ರಯಾಣ, ಸಾದಿಲ್ವಾರು ಇತ್ಯಾದಿಗಳ ಬಿಲ್ಲುಗಳನ್ನು ತಯಾರಿಸಿ ಖಜಾನೆಗೆ ಸಲ್ಲಿಸುವುದು. ಆನ್ ಲೈನ್ ಮೂಲಕ ಗುತ್ತಿಗೆದಾರರ ಹೊಸ ಪರವಾನಗಿ ಮತ್ತು ನವೀಕರಣ ಮತ್ತು ತಂತಿ ರಹದಾರಿ ಹಾಗೂ ಸೂಪರ್ ವೈಸರ್‌ಗಳ ಹೊಸ ರಹದಾರಿಗಳ ಮತ್ತು ನವೀಕರಣ ಅರ್ಜಿಗಳನ್ನು, ಮೇಲ್ವಿಚಾರಕರ ಮತ್ತು ತಂತಿ ರಹದಾರಿ ಹಿಂಬರಹವನ್ನು ಸಂಬಂಧಪಟ್ಟ ಉವಿಪ ನಿರ್ದೇಶನದಂತೆ ನಿರ್ವಹಿಸುವುದು ಹಾಗೂ ಕಚೇರಿಗೆ ಸಂಬಂಧಿಸಿದಂತೆ ಮೇಲಾಧಿಕಾರಿಗಳು ಸೂಚಿಸಿದ ಇತರೆ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು. ಉವಿಪ, ಸವಿಪ–1 ಮತ್ತು ಸವಿಪ–2 ರವರುಗಳ ನಿಯತಕಾಲಿಕ ಪರಿವೀಕ್ಷಣೆ ಬಿಲ್ಲು ತಯಾರಿಸುವುದು, ಬಾಕಿ ವಸೂಲಾತಿಗಾಗಿ ಕ್ರಮ ಕೈಕೊಳ್ಳಲು ಪತ್ರ ವ್ಯವಹಾರ ಮಾಡುವುದು ಹಾಗೂ ಡಿಸಿಬಿ ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಇತರೆ ಕೆಲಸ ಕಾರ್ಯಗಳು.

**7) ದ್ವಿದಸ**

ಟಪಾಲುಗಳ ಸ್ವೀಕೃತಿ ಹಾಗೂ ರವಾನಿಸುವ ಕೆಲಸ, ಸರಕಾರಿ ಅಂಚೆ ಚೀಟಿಗಳ ಲೆಕ್ಕ ಪತ್ರ ಇಡುವದು, ಕಚೇರಿ ಕಡತಗಳ ನಿರ್ವಹಣೆ, ವಿದ್ಯುತ್ ತೆರಿಗೆಯ ಫಾರ್ಮ 'ಎಫ್' ಮತ್ತು 'ಜಿ' ವಿವರ ದಾಖಲಿಸುವದು, ನಿರ್ವಹಣೆ ಮತ್ತು ಮೇಲಾಧಿಕಾರಿಗಳು ಸೂಚಿಸಿದ ಇತರೆ ಸರ್ಕಾರಿ ಕೆಲಸಗಳನ್ನು ನಿರ್ವಹಿಸುವುದು.

**8) ಶೀಘ್ರಲಿಪಿಗಾರರು/ಕಂಪ್ಯೂಟರ್ ಆಪರೇಟರ್ (ಹೊರ ಗುತ್ತಿಗೆ)**

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಆಪ್ತ ಸಹಾಯಕರಾಗಿ ಕಚೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಹಾಗೂ ಇತರೆ ಅಧಿಕಾರಿಗಳು ಸೂಚಿಸುವ ಕೆಲಸ ಕಾರ್ಯಗಳು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಬರುವ ಪತ್ರ ಮತ್ತು ಕಡತಗಳ ಚಲನವಲನಗಳನ್ನು ನಿರ್ವಹಿಸುವುದು. ಕಚೇರಿಯ ಎಲ್ಲಾ ಕಾಗದ ಪತ್ರಗಳನ್ನು ಬೆರಳಚ್ಚು/ ಗಣಕೀಕೃತ ಮಾಡುವುದು.

**9) ಹೆಲ್ಪರ್:** ಕಚೇರಿ ಮುಖ್ಯಸ್ಥರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

**10) ಗ್ರೂಪ್ ಡಿ ನೌಕರರು:** ಕಚೇರಿ ಮುಖ್ಯಸ್ಥರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

## III. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ: –

ಇಲಾಖೆಯ ವೃತ್ತದ, ಉಪ ವಿಭಾಗ ಕಚೇರಿಗಳಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸಂಬಂಧಿಸಿದ ಅಧಿಕಾರಿಗಳು ನೀಲಿನಕ್ಷೆ ಪರಿಶೀಲಿಸುತ್ತಾರೆ, ನ್ಯೂನ್ಯತೆಗಳನ್ನು ಗ್ರಾಹಕರಿಗೆ ತಿಳಿಸಿ ಸರಿಪಡಿಸಿದ ನಕ್ಷೆಗಳನ್ನು ಅನುಮೋದನೆ ಮಾಡುತ್ತಾರೆ. ಗ್ರಾಹಕರಿಂದ ಸಮಾಪನಾ ವರದಿ ಸ್ವೀಕೃತ ಗೊಂಡನಂತರ, ಪ್ರಥಮ ಪರಿವೀಕ್ಷಣೆ ನೆಡೆಸಿ ಮುಂದಿನ ಕ್ರಮ ಕೈ ಗೊಳ್ಳಲಾಗುತ್ತದೆ.

## IV. ಇಲಾಖಾ ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:-

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯು ತನ್ನ ಕಚೇರಿಯ ಕೆಲಸ ಸೂಸೂತ್ರವಾಗಿ ನಿರ್ವಹಿಸಲು ಭಾರತೀಯ ವಿದ್ಯುಚ್ಚಕ್ತಿ ಕಾಯಿದೆ 2003 ಹಾಗೂ ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ (ಮೆಸರ್ಸ್ ರಿಲೆಟಿಂಗ ಟು ಸೆಫ್ಟಿ ಆ್ಯಂಡ ಎಲೆಕ್ಟ್ರಿಸಿಟಿ ಸಪ್ಲೈ) ರೂಲ್ಸ 2010, ಪರಿವೀಕ್ಷಣಾ ಕೈಪಿಡಿ (ಮ್ಯಾನ್ಯುಯಲ್) – 1987, ವಿದ್ಯುತ್ ಬಳಕೆ ಮೇಲಣ ತೆರಿಗೆ ಕೈಪಿಡಿ–1959 ಮತ್ತು ನಿಯಮ 2014, ಲಿಫ್ಟ್ ಆಕ್ಟ್ 2012 ಮತ್ತು ನಿಯಮಗಳು–2014 ಕೈಪಿಡಿಗಳನ್ನು ಮತ್ತು ಕರ್ನಾಟಕ ಸರ್ಕಾರದಿಂದ ಸೃಜನೆಗೊಂಡ ಕಚೇರಿ ನಿಯಮಗಳನ್ನು ಪಾಲಿಸಲಾಗುತ್ತದೆ.

## V. ಇಲಾಖಾ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಬಳಸುವ ನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು

1) ಕೆ.ಸಿ.ಎಸ್.ಆರ್ – 1958.
2) ಕೆ.ಎಫ್.ಸಿ– 1958,
3) ಕೆ.ಟಿ.ಸಿ.
4) ಆಯ ವ್ಯಯ ಕೈಪಿಡಿ.
5) ಕಚೇರಿ ಕಾರ್ಯ ವಿಧಾನ ಕೈಪಿಡಿ.
6) ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) 1977.
7) ಕೆ.ಸಿ.ಎಸ್ (ಪ್ರೋಬೇಷನ್) 1977.
8) ಕೆ.ಸಿ.ಎಸ್ (ಸಿಸಿಎ) ನಿಯಮಗಳು– 1957.
9) ಕೆ.ಸಿ.ಎಸ್ (ಕಾಂಡಕ್ಟ್) ನಿಯಮಗಳು– 1966.
10) ಕೆ.ಸಿಎಸ್ (ಜೇಷ್ಠತಾ) ನಿಯಮಗಳು.
11) ಕೆ.ಸಿ.ಎಸ್ (ಪಿಪಿಪಿ) ಆ್ಯಕ್ಟ್ 1973 ಮತ್ತು ನಿಯಮಗಳು– 1978.
12) ಭಾರತೀಯ ವಿದ್ಯುತ್ ಕಾಯ್ದೆ – 2003
13) ಭಾರತೀಯ ವಿದ್ಯುತ್ ನಿಯಮಗಳು –1956.
14) Central Electricity Authority (Measures Relating to Safety & Electric Supply) Regulations, 2010
15) ಕರ್ನಾಟಕ ಸಿನಿಮಾ (ನಿಯಂತ್ರಣ) ಕಾಯ್ದೆ 1964 ಮತ್ತು ನಿಯಮಗಳು 2014.
16) ಕರ್ನಾಟಕ ಲಿಫ್ಟ್ ಕಾಯ್ದೆ 2012 ಮತ್ತು ನಿಯಮಗಳು – 2014.
17) ಕರ್ನಾಟಕ ಎಕ್ಸಿಬಿಷನ್ ಆನ್ ಟಿವಿ ತ್ರೂ ವಿಸಿಆರ್ ಆರ್ ಲೇಸರ್ ಡಿಸ್ಕ್ (ನಿಯಂತ್ರಣ)

ನಿಯಮಗಳು – 1984.

18) ಕರ್ನಾಟಕ ವಿದ್ಯುತ್ ಗುತ್ತಿಗೆದಾರರ ಪರವಾನಿಗೆ ಮತ್ತು ವಿದ್ಯುತ್ ಪರ್ಯವೇಕ್ಷಕರ ಮತ್ತು ತಂತಿಕೆಲಸಗಾರರ ರಹದಾರಿ ನೀಡುವಿಕೆ. – 2012.

19) ಕರ್ನಾಟಕ ವಿದ್ಯುಚ್ಛಕ್ತಿ ಬಳಕೆಯ ಮೇಲಣ ತೆರಿಗೆ ಕಾಯ್ದೆ –1959 ಮತ್ತು ತೆರಿಗೆ ನಿಯಮಗಳು 2014

20) ನ್ಯಾಷನಲ್ ಎಲೆಕ್ಟ್ರಿಸಿಟಿ ಕೋಡ್ – 1985.

21) ಕಚೇರಿ ಕೈಪಿಡಿ.

## VI ಇಲಾಖೆಯು ಹೊಂದಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ :–

1) ಸೇವಾ ಪುಸ್ತಕಗಳು ಮತ್ತು ಬಡ್ತಿ ವಹಿ.

2) ವೇತನ ವಹಿ.

3) ಪೇ ಮತ್ತು ಪ್ರಯಾಣ ಭತ್ಯೆ ವಹಿ.

4) ಬಿಲ್ ವಹಿ.

5) ಗಳಿಕೆ ರಜೆ ನಗದೀಕರಣ ಮತ್ತು ರಜೆ ಮಂಜೂರಾತಿ ವಹಿ.

6) ಸಾದಿಲ್ವಾರು ಬಿಲ್ಲು ವಹಿ

7) ಸ್ವಿಕೃತಿ ಮತ್ತು ರವಾನೆ ವಹಿ.

8) ಸಾಮಾನ್ಯ ಆದೇಶ ಮತ್ತು ಸುತ್ತೋಲೆಗಳು.

9) ನ್ಯಾಯಾಲಯ ವ್ಯಾಜ್ಯ ಕಡತ.

10) ನಗದು ಪುಸ್ತಕ ಮತ್ತು ನಗದು ಪಾವತಿ ಪುಸ್ತಕ.

11) ಡಿಡಿ, ಚೆಕ್ ಮತ್ತು ಹಣ ಬಟವಡೆ ವಹಿ.

12) ಮುಂಗಡ ಹಣ ಪಾವತಿ ವಹಿ.

13) ಕಚೇರಿ ಖರ್ಚು ವೆಚ್ಚದ ಕ್ರೋಡಿಕೃತ 2045 ರಿಜಿಸ್ಟರ್.

14) ಪಿಠೋಪಕರಣಗಳ ಹಾಗೂ ಲೈಬ್ರರಿ ಪುಸ್ತಕದ ವಹಿ

15) ಮಾಹಿತಿ ಹಕ್ಕು ನಿಯಮದಡಿ ಒದಗಿಸಲಾದ ಮಾಹಿತಿಯ ದಾಖಲಾತಿ ವಹಿ.

### ತಾಂತ್ರಿಕ ವಿಭಾಗ:–

1) ವಿದ್ಯುತ್ ಸ್ಥಾವರಗಳ ಅಂಕಿ ಅಂಶಗಳ ವಿವರ.

2) ವಿದ್ಯುತ್ ಅಪಘಾತಗಳ ಅಂಕಿ ಅಂಶಗಳ ವಹಿ.

3) ಪ್ರಗತಿ ಪರಿಶೀಲನಾ ಸಭೆಗಳ ರಿಜಿಸ್ಟರ್.

4) ತಾಂತ್ರಿಕ ಸುತ್ತೋಲೆಗಳ ಕಡತ.

5) ನೀಲಿ ನಕ್ಷೆ ಅನುಮೋದನೆ ವಹಿ.

6) ಚಾಲನಾ ಅನುಮೋದನೆ ವಹಿ.

7) ವಾರ್ಷಿಕ ಮಾಹಿತಿ ಹಕ್ಕು ರಿಟರ್ನಗಳು – (ಫಾರ್ಮ 1, 2, 3).

8) ವಿದ್ಯುತ್ ಅಪಘಾತಗಳ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್.

## VII. ಇಲಾಖೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ವ್ಯವಸ್ಥೆಯ ವಿವರಗಳು

– ಈ ಇಲಾಖೆಗೆ ಅನ್ವಯಿಸುವುದಿಲ್ಲ

**VIII.** ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ

– ಈ ಇಲಾಖೆಗೆ ಅನ್ವಯಿಸುವುದಿಲ್ಲ

**IX. ಅಧಿಕಾರಿಗಳು ಮತ್ತು ನೌಕರ ನಿರ್ದೇಶಿಕೆ :–**

| ಕ್ರಮ ಸಂಖ್ಯೆ: | ಹುದ್ದೆಯ ವಿಭಾಗ | ಹೆಸರು ಶ್ರೀಯುತ/ಶ್ರೀಮತಿ | ದೂರವಾಣಿ: |
|---|---|---|---|
| 1) | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | ಶ್ರೀ. ಶ್ರೀನಿವಾಸ್.ಜೆ.ಹೆಚ್. | 08194–222357 |
| 2) | ಉಪ ವಿದ್ಯುತ್ ಪರಿವೀಕ್ಷಕರು | ಶ್ರೀಮತಿ. ರಾಧ.ಎಂ.ಎಸ್ | 08194–222357 |
| 3) | ಸಹಾಯಕ ವಿದ್ಯುತ್ ಪರಿವೀಕ್ಷಕರು–ಕಚೇರಿ | ಶ್ರೀಮತಿ. ನಯನ.ಎಸ್.ಓ | 08194–222357 |
| 4) | ಸಹಾಯಕ ವಿದ್ಯುತ್ ಪರಿವೀಕ್ಷಕರು–1 ಕ್ಷೇತ್ರಿಯ | ಶ್ರೀಮತಿ. ಸಹನ ದಾಸ್ | 08194–222357 |
| 5) | ಸಹಾಯಕ ವಿದ್ಯುತ್ ಪರಿವೀಕ್ಷಕರು–2 ಕ್ಷೇತ್ರಿಯ | ಶ್ರೀಮತಿ. ಆಶಾ.ಎನ್. (ನಿಯೋಜನೆ ಮೇರೆಗೆ) | 08194–222357 |
| 6) | ಅಧೀಕ್ಷಕರು | ಶ್ರೀ. ರಮೇಶ್. ಸಿ | 08194–222357 |
| 7) | ಪ್ರ ದ ಸ | ತಿಪ್ಪೇಸ್ವಾಮಿ.ಆರ್ (ನಿಯೋಜನೆ ಮೇರೆಗೆ) | 08194–222357 |
| 8) | ಶೀಘ್ರ ಲಿಪಿಕಾರರು | ಶ್ರೀ ಆನಂದ್ ಕುಮಾರ್ ಎಸ್.ಕೆ. (ಕಿಯೋನಿಕ್ಸ್ ಮುಖಾಂತರ) | 08194–222357 |
| 9) | ದ್ವಿ.ದ.ಸ | ಶ್ರೀ ಚಂದ್ರಶೇಖರ್ | 08194–222357 |
| 10) | ಸಹಾಯಕರು | ಖಾಲಿ ಇದೆ | – |
| 11) | ಗ್ರೂಪ್ 'ಡಿ' ಜವಾನರು | ಶ್ರೀಮತಿ.ಜೈನಬಿ | 08194–222357 |

**X. ಇಲಾಖೆಯ ನಿಯಮಗಳಲ್ಲಿ ಉಪಬಂಧಿಸಿದಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನ :–**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಮಂಜೂರಾದ ಸಿಬ್ಬಂದಿ | ಕಾರ್ಯನಿರ್ವಸುತ್ತಿರುವ ಸಿಬ್ಬಂದಿ | ವೇತನ ಶ್ರೇಣಿ |
|---|---|---|---|---|
| 1 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 01 | 01 | 74400–109600 |
| 2 | ಉಪ ವಿದ್ಯುತ್ ಪರಿವೀಕ್ಷಕರು | 01 | 01 | 52650–97100 |
| 3 | ಸಹಾಯಕ ವಿದ್ಯುತ್ ಪರಿವೀಕ್ಷಕರು | 03 | 03 | 43100–83900 |
| 4 | ಅಧೀಕ್ಷಕರು | 01 | 01 | 37900–70850 |
| 5 | ಪ್ರ ದ ಸ | 01 | 01 | 27650–52650 |
| 6 | ಶೀಘ್ರ ಲಿಪಿಕಾರರು | 01 | 01 | ಹೊರಗುತ್ತಿಗೆ (ಕಿಯೋನಿಕ್ಸ್ ಮುಖಾಂತರ) |

| | | | | |
|---|---|---|---|---|
| 7 | ದ್ವಿ ದ ಸ | 01 | 01 | 21400–42000 |
| 8 | ಹೆಲ್ಪರ | 01 | – | 18600–32600 |
| 9 | ಗ್ರೂಪ್ 'ಡಿ' ಜವಾನ | 01 | 1 | 19950–37900 |
| ಒಟ್ಟು | | **11** | 10 | |

**XI** ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:

– ಈ ಇಲಾಖೆಗೆ ಅನ್ವಯಿಸುವುದಿಲ್ಲ

**XII** ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ

– ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ

**XIII** ನೀಡಿರುವ ರಿಯಾಯತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರ

– ಈ ಇಲಾಖೆಗೆ ಅನ್ವಯಿಸುವುದಿಲ್ಲ

**XIV** ಕಛೇರಿಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರ

– ಇಲಾಖೆಯಲ್ಲಿ ವಿದ್ಯುನ್ಮಾನ ರೂಪತಾಂತರವು ಪ್ರಗತಿಯಲ್ಲಿರುವುದರಿಂದ ಪೂರ್ತಿ ಮಾಹಿತಿ ಲಭ್ಯವಿರುವುದಿಲ್ಲ.

**XV** ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ.

– ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ

**XVI** ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರ ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು.

| ಕ್ರಮ ಸಂಖ್ಯೆ | ಹೆಸರು ಮತ್ತು ಅಧಿಕಾರಿಯ ಹುದ್ದೆ | ಮಾಹಿತಿ ಹಕ್ಕು 2005 ರ ಪ್ರಕಾರ ಹುದ್ದೆ | ದೂರವಾಣಿ |
|---|---|---|---|
| 1 | ಶ್ರೀ.ಶ್ರೀನಿವಾಸ್.ಜೆ.ಹೆಚ್.<br>ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು,<br>ಚಿತ್ರದುರ್ಗ | ಅಪೀಲು ಅಧಿಕಾರಿ | 08194–222357 |
| 2 | ಶ್ರೀಮತಿ.ನಯನ.ಎಸ್.ಓ<br>ಸಹಾಯಕ ವಿದ್ಯುತ್ ಪರಿವೀಕ್ಷಕರು<br>ಚಿತ್ರದುರ್ಗ, ಕಚೇರಿ | ಸಾರ್ವಜನಿಕ ಮಾಹಿತಿ ಅಧಿಕಾರಿ,<br>(ಚಿತ್ರದುರ್ಗ ವೃತ್ತ ಕಛೇರಿಯ ತಾಂತ್ರಿಕ ಮಾಹಿತಿ) | 08194–222357 |
| 3 | ಶ್ರೀಮತಿ.ರಾಧ.ಎಂ.ಎಸ್<br>ಉಪ ವಿದ್ಯುತ್ ಪರಿವೀಕ್ಷಕರು, | ಸಾರ್ವಜನಿಕ ಮಾಹಿತಿ ಅಧಿಕಾರಿ,<br>(ಉವಿಪ ಚಿತ್ರದುರ್ಗ ಕಛೇರಿಯ ತಾಂತ್ರಿಕ | 08194–222357 |

| | | | |
|---|---|---|---|
| | ಚಿತ್ರದುರ್ಗ | ಮಾಹಿತಿ) | |
| 4 | ಶ್ರೀಮತಿ. ಸಹನ ದಾಸ್<br>ಸಹಾಯಕ ವಿದ್ಯುತ್ ಪರಿವೀಕ್ಷಕರು–1 (ಕ್ಷೇತ್ರಿಯ) | ಸಹಾಯಕ ಸಾರ್ವಜನಿಕ ಮಾಹಿತಿ (ಪರಿವೀಕ್ಷಣಾ ವ್ಯಾಪ್ತಿ ಹಾಗೂ ಅಧಿಕಾರ ಪ್ರತಿ ನಿಯೋಜನೆ ಅನುಸಾರ ಹಾಗು ಕಛೇರಿಯ ತಾಂತ್ರಿಕ ವಿವರಗಳು) | 08194–222357 |
| 5 | ಶ್ರೀಮತಿ. ಆಶಾ.ಎನ್. (ನಿಯೋಜನೆ ಮೇರೆಗೆ)<br>ಸಹಾಯಕ ವಿದ್ಯುತ್ ಪರಿವೀಕ್ಷಕರು–2 (ಕ್ಷೇತ್ರಿಯ) | ಸಹಾಯಕ ಸಾರ್ವಜನಿಕ ಮಾಹಿತಿ (ಪರಿವೀಕ್ಷಣಾ ವ್ಯಾಪ್ತಿ ಹಾಗೂ ಅಧಿಕಾರ ಪ್ರತಿ ನಿಯೋಜನೆ ಅನುಸಾರ ಹಾಗು ಕಛೇರಿಯ ತಾಂತ್ರಿಕ ವಿವರಗಳು) | 08194–222357 |
| 6 | ಶ್ರೀ ರಮೇಶ್.ಸಿ<br>ಅಧೀಕ್ಷಕರು | ಸಾರ್ವಜನಿಕ ಮಾಹಿತಿ ಅಧಿಕಾರಿ, (ಆಡಳಿತ ಬಗ್ಗೆ ಮಾಹಿತಿ) | 08194–222357 |

**XVII ಸಾರ್ವಜನಿಕರಿಗೆ ಸಂಬಂಧಿಸಿದ ಪ್ರಮುಖ ಕಾರ್ಯನೀತಿಗಳನ್ನು ರೂಪಿಸುವಾಗ ಅಥವಾ ನಿರ್ಧಾರ ಗಳನ್ನು ಘೋಷಿಸುವಾಗ ಎಲ್ಲಾ ಸುಸಂಗತ ಸಂಗತಿಗಳನ್ನು ಪ್ರಕಟಿಸತಕ್ಕದ್ದು. ಆಡಳಿತಾತ್ಮಕ ಅಥವಾ ಅರೆನ್ಯಾಯಿಕ ಸ್ವರೂಪದ ನಿರ್ಣಯಗಳಿಂದ ಬಾಧಿತರಾದ ವ್ಯಕ್ತಿಗಳಿಗೆ ಅದರ ಕಾರಣಗಳನ್ನು ಒದಗಿಸತಕ್ಕದ್ದು.**

ಪ್ರತೀ ವರ್ಷ ಮಾಹಿತಿ ಹಕ್ಕು ಅಧಿನಿಯಮದ ಮೇರೆಗೆ ಮಾಹಿತಿಯನ್ನು ಪರಿಷ್ಕರಿಸಿ ಸಾರ್ವಜನಿಕರಿಗೆ ತೃಪ್ತಿಯಾಗುವಂತೆ ಡಾಟಬೇಸನ್ನು ಅಪ್‌ಡೇಟ್ ಮಾಡಲಾಗುವುದು. ಅಧಿಕಾರ ಪ್ರತ್ಯಾಯೋಜನೆಯ ವಿವರಗಳು ಇಲಾಖೆಯ ತಾಂತ್ರಕ ವೆಬ್‌ಸೈಟ್

**http://www.ksei.gov.in** ನಲ್ಲಿ ಲಭ್ಯವಿರುತ್ತದೆ.

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು
ಚಿತ್ರದುರ್ಗ

ಮುಖ್ಯ ವಿದ್ಯುತ್ ಪರಿವೀಕ್ಷಕರು
ವಿದ್ಯುತ್ ಪರಿವೀಕ್ಷಣಾಲಯ
ಚಿತ್ರದುರ್ಗ-577501

---

ಮೆಮೊ ಸಂಖ್ಯೆ: ಡಿಸಿಇಐ(ಚಿತ್ರದುರ್ಗ)/ಎಫ್–ಆರ್‌ಟಿಐ/2021–22/2985-88 ದಿನಾಂಕ: 03/03/2022.

ಪ್ರತಿಯನ್ನು ಸಲ್ಲಿಸಲಾಗಿದೆ.

1. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಇಂಧನ ಇಲಾಖೆ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಸಂಬಂಧಪಟ್ಟ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಎಲ್ಲಾ ಮಾಹಿತಿಯನ್ನು ಸರ್ಕಾರಿ ಆದೇಶದಂತೆ ನಿರ್ವಹಿಸುವುದು.
5. ಕಛೇರಿ ಕಡತ.